

## ಕೃತಿಗೆ ಸಿಕ್ಕಾಪಟ್ಟೆ 'ಕಿಕ್'

'ತುಂಬಾ ಎಕ್ಸೈಟ್ ಆಗಿದ್ದೇನೆ' ಎಂದರು ಕೃತಿ ಕರಬಂಧ. ಅವರ ಈ ಎಕ್ಸೈಟ್‌ಮೆಂಟ್‌ಗೆ ಕಾರಣ 'ಸೂಪರ್ ರಂಗ' ಚಿತ್ರದ ಬಗೆಗಿನ ನಿರೀಕ್ಷೆಗಳು ಹಾಗೂ ನಟ ಉಪೇಂದ್ರ ಅವರೊಂದಿಗೆ ನಟಿಸಿದ ಅನುಭವ. ಈ ಮೊದಲು ಕೂಡ ಕೃತಿ ಕನ್ನಡ ಚಿತ್ರಗಳಲ್ಲಿ ನಟಿಸಿದ್ದಾರಾದರೂ ಉಪೇಂದ್ರರಂಥ ವರ್ಚಸ್ವೀ ನಾಯಕ ಹಾಗೂ ದೊಡ್ಡ ಬಜೆಟ್‌ನ ಕನ್ನಡ ಸಿನಿಮಾದಲ್ಲಿ ನಟಿಸಿರುವುದು ಇದೇ ಮೊದಲು ಎನ್ನಬೇಕು.

'ಸೂಪರ್ ರಂಗ' ತೆಲುಗಿನ 'ಕಿಕ್' ಚಿತ್ರದ ರೀಮೇಕ್. ಸಲ್ಮಾನ್ ಖಾನ್ ನಟಿಸಿದ್ದ ಇದೇ ಚಿತ್ರದ ಹಿಂದಿ ಆವೃತ್ತಿ ಇತ್ತೀಚೆಗೆ ತೆರೆ ಕಂಡು ದೊಡ್ಡ ಗೆಲುವು ಪಡೆದಿದೆ. ಆದರೆ, ಈವರೆಗೆ ಈ ಎರಡು 'ಕಿಕ್'ಗಳನ್ನೂ ಕೃತಿ ಅವರು ನೋಡಿಲ್ಲವಂತೆ. ಅವರದೇನಿದ್ದರೂ ಕನ್ನಡ ರಂಗನದೇ ಧ್ಯಾನ. 'ಸೂಪರ್ ರಂಗ' ತೆರೆ ಕಾಣಲು ಕಾಯುತ್ತಿರುವೆ ಎನ್ನುವ ಅವರು ಚಿತ್ರದಲ್ಲಿ ವಿಭಿನ್ನ ಕಾಸ್ಟ್ಯೂಮ್‌ಗಳಲ್ಲಿ ಕಂಗೊಳಿಸಿದ್ದಾರಂತೆ. 'ಈ ಕಾಸ್ಟ್ಯೂಮ್‌ಗಳನ್ನು ಡಿಸೈನ್ ಮಾಡಿರುವುದು ನನ್ನ ಅಮ್ಮ' ಎಂದು ಹೇಳಲು ಕೃತಿ ಮರೆಯುವುದಿಲ್ಲ.

ಅಂದ ಹಾಗೆ, 'ಸೂಪರ್ ರಂಗ' ಉಪೇಂದ್ರ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ತೆರೆ ಕಾಣುತ್ತಿದೆ. 'ಈ ಸಿನಿಮಾವನ್ನು ಗೆಲ್ಲಿಸುವ ಮೂಲಕ ಅಭಿಮಾನಿಗಳು ನನಗೆ ಗಿಫ್ಟ್ ಕೊಡಬೇಕು' ಎನ್ನುತ್ತಾರೆ ಉಪೇಂದ್ರ. 'ಇತ್ತೀಚಿನ ದಿನಗಳಲ್ಲಿ ನಾನು ನೋಡಿದ ಅತ್ಯುತ್ತಮ ಸ್ಕ್ರಿಪ್ಟ್ ಈ ಚಿತ್ರದ್ದು. ಇದು ಕುಟುಂಬ ಸಮೇತ ಎಲ್ಲರೂ ಕೂತ ನೋಡಬಹುದಾದ ಸೂಪರ್ ಸಿನಿಮಾ' ಎಂದೂ ಉಪೇಂದ್ರ ಹೇಳುತ್ತಾರೆ.

ಕೆ. ಮಂಜು ರಂಗನ ನಿರ್ಮಾಪಕರು. ತಮ್ಮ ಸಿನಿಮಾ ತೆಲುಗು ಅಥವಾ ಹಿಂದಿಗಿಂತಲೂ ಯಾವ ರೀತಿಯಲ್ಲೂ ಕಡಿಮೆಯಿಲ್ಲ ಎನ್ನುವುದು ಅವರ ಆತ್ಮವಿಶ್ವಾಸ. ನಿರ್ದೇಶಕ ಸಾಧು ಕೋಕಿಲ ಕೂಡ 'ಸೂಪರ್ ರಂಗ'ನ ಗೆಲುವಿನ ಬಗ್ಗೆ ಹಾಗೂ ಉಪೇಂದ್ರರ ಮ್ಯಾನರಿಸಂಗಳು ಅಭಿಮಾನಿಗಳಿಗೆ ಇಷ್ಟವಾಗುವ ಕುರಿತು ಆತ್ಮವಿಶ್ವಾಸದ ಮಾತುಗಳನ್ನಾಡುತ್ತಾರೆ.

## ಚೆಂಡಾಡಿದ ರಣಚಂಡಿ!

ರಾಗಿಣಿ ರಣಚಂಡಿಯ ಮೂಡ್‌ನಲ್ಲಿದ್ದರು. ಉಹುಂ, 'ವೀರ ರಣಚಂಡಿ' ಎನ್ನಬೇಕು. ಈ ಚಿತ್ರದ ಸಾಹಸ ಸನ್ನಿವೇಶವೊಂದರ ಚಿತ್ರೀಕರಣದಲ್ಲಿ ಗೂಂಡಾಗಳನ್ನು ಫುಟ್ಬಾಲ್ ಆಡಿದ ನಂತರ ದಣಿವಾರಿಸಿಕೊಳ್ಳುತ್ತಿದ್ದ ಅವರು ಸಿನಿಮಾದ ವಿಶೇಷಗಳ ಬಗ್ಗೆ ಮಾತನಾಡಿದರು.

'ರಾಗಿಣಿ ಐಪಿಎಸ್ ಸಿನಿಮಾದ ಗೆಲುವು ಕಲಾವಿದೆಯಾಗಿ ನನ್ನಲ್ಲಿ ಆತ್ಮವಿಶ್ವಾಸ ತುಂಬಿತು, ಜನರ ಪ್ರೀತಿಯನ್ನೂ ದೊರಕಿಸಿಕೊಟ್ಟಿತು. ಆ ಚಿತ್ರಕ್ಕಿಂತಲೂ ಇದು ನಾಲ್ಕು ಪಟ್ಟು ಅದ್ದೂರಿಯಾಗಿದೆ. ಕಥೆಯೂ ಚೆನ್ನಾಗಿದೆ. ಚಿತ್ರದಲ್ಲಿ ಕೆಲವು ವಿಶೇಷ ಸಾಹಸ ದೃಶ್ಯಗಳಿಗೆ ಪ್ರಯತ್ನಿಸಿದ್ದೇವೆ. ನನ್ನೊಂದಿಗೆ ಪ್ರತಿಭಾವಂತ ಕಲಾವಿದರು ಚಿತ್ರದಲ್ಲಿ ನಟಿಸಿದ್ದಾರೆ' ಎಂದು ರಾಗಿಣಿ ಹೇಳಿದರು. ಅಂದ ಹಾಗೆ, ಚಿತ್ರದಲ್ಲಿ ಆರು ಸಾಹಸ ಸನ್ನಿವೇಶಗಳಿದ್ದು ಅವುಗಳನ್ನು ನಾಲ್ವರು ಸ್ಟಂಟ್ ಮಾಸ್ಟರ್‌ಗಳು ಸಂಯೋಜಿಸಿದ್ದಾರಂತೆ.

ಕುಪ್ಪುಸ್ವಾಮಿ ನಿರ್ಮಾಣದ 'ವೀರ ರಣಚಂಡಿ'ಯ ನಿರ್ದೇಶನ ಆನಂದ್ ಪಿ. ರಾಜು ಅವರದು. ಚಿತ್ರದಲ್ಲಿ ರಾಗಿಣಿ ಅವರನ್ನು ಯಾವ ಸೂಪರ್ ಸ್ಟಾರ್‌ಗೂ ಕಡಿಮೆಯಿಲ್ಲದಂತೆ ತೋರಿಸಿರುವ ಖುಷಿ ಅವರದು. ವ್ಯಕ್ತಿಯಲ್ಲಿನ ಮಾನವೀಯತೆ ಹಾಗೂ ಪಶುತ್ವ ಎರಡನ್ನೂ ಅವರ ಸಿನಿಮಾ ಬಿಂಬಿಸಲಿದೆಯಂತೆ. ಗಿರಿ ಅವರ ಛಾಯಾಗ್ರಹಣ ಇರುವ ಚಿತ್ರದ ತಾರಾಗಣದಲ್ಲಿ ಶರತ್ ಲೋಹಿತಾಶ್ವ, ರಮೇಶ್ ಭಟ್, ಪದ್ಮಜಾರಾವ್, ಮುಂತಾದವರಿದ್ದಾರೆ.

■ ರಘು

